# ಆಹಾ ಸುದ್ದಿ!

★ ಸಸಿತೋಟ



ಇವರು 'ಆಧುನಿಕ' ಆದಿ ಮಾನವರು. ಜರ್ಮನಿಯಲ್ಲಿರುವ ಶಿಲಾಯುಗ ಉದ್ಯಾನದಲ್ಲಿ ಪ್ರವಾಸಿಗರು ಅರೆಬರೆ ಬಟ್ಟೆ ತೊಟ್ಟು ಹೀಗೊಂದು ಅನುಭವ ಪಡೆಯಬಹುದಂತೆ. ಕಾಸು ಖರ್ಚು ಮಾಡುವವರಿರುವಾಗ ಸಂಪಾದಿಸುವವರೂ ದಿನಕ್ಕೊಂದು ದಾರಿ ಕಂಡುಕೊಳ್ಳುತ್ತಿದ್ದಾರೆ.

ಇಟಲಿಯ ಆ್ಯಂಡ್ರೂ ಮ್ಯುರಾ ಸ್ಪೀಡ್ ಬೋಟ್ ಚಾಂಪಿಯನ್ ಕಂ ಅಲ್ಲಿಯ ಸಂಸತ್ ಸದಸ್ಯ. ಆತ ಸಂಸತ್‌ಗೆ ಸತತ ಗೈರು ಹಾಜರಾಗುತ್ತಿದ್ದುದನ್ನು ಇತರ ಸದಸ್ಯರು ಆಕ್ಷೇಪಿಸಿ ಅಮಾನತು ಮಾಡಲು ಒತ್ತಾಯಿಸಿದರಂತೆ. ಅದಕ್ಕೆ ಮ್ಯುರಾ ಜಗ್ಗದೇ ಬೋಟ್‌ನಿಂದಲೂ ರಾಜಕೀಯ ಮಾಡಬಹುದು ಎಂದು ಹೇಳಿಕೆ ಕೊಟ್ಟಿದ್ದು ಅದು ವೈರಲ್ ಆಗಿದೆ. ನಮ್ಮಲ್ಲಿಯೂ ಸಂಸತ್ ಸದಸ್ಯರಾಗಿದ್ದ ಬಾಲಿವುಡ್ ನಟ/ ನಟಿಯರು ಸೆಟ್‌ನಿಂದಲೇ ರಾಜಕೀಯ ಮಾಡಲಿಲ್ಲವೇ!

ಚೀನಾದ ಟಿಯಾನ್‌ಜಿನ್ ನಗರದಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದಾಗ ಕಂಡು ಬಂದ ದೃಶ್ಯವಿದು. ಮಹಿಳೆಯೊಬ್ಬಳು ತನ್ನ ಮುದ್ದಿನ ಬಾತುಕೋಳಿಯನ್ನು ವಾಕಿಂಗ್‌ಗೆ ಕರೆದೊಯ್ದು ಖುಷಿಪಟ್ಟಳಂತೆ. ರೋಮ್‌ಗೆ ಬೆಂಕಿ ಬಿದ್ದಾಗ ನೀರೊ ಪಿಟೀಲು ಬಾರಿಸಿದನಂತೆ ಎಂಬ ಮಾತನ್ನು ಆಕೆ ಪಾಲಿಸಿದಳು ಅಷ್ಟೆ.





ಈ ರೇಸ್ ಶುರುವಾಗಿದ್ದೇ 'ರೆಡಿ, ಸ್ಟೆಡಿ, ಸ್ಲೋ' ಎಂಬ ಘೋಷಣೆಯೊಂದಿಗೆ. ಸುತ್ತ ನೆರೆದವರು ಎಷ್ಟೇ ಹುರಿದುಂಬಿಸಿದರೂ, ಚೀಯರ್ ಗರ್ಲ್ ಎಷ್ಟೇ ಕುಣಿದಾಡಿದರೂ ಸ್ಪರ್ಧಾಳುಗಳು ಮಾತ್ರ ಆರಂಭಿಕ ಗೆರೆಯನ್ನು ಬಿಟ್ಟು ಕದಲಲಿಲ್ಲವಂತೆ. ಇದು ಇಂಗ್ಲೆಂಡಿನ ನಾರ್‌ಫೋಕ್‌ನಲ್ಲಿ ನಡೆದ ವಾರ್ಷಿಕ ಬಸವನಹುಳು ರೇಸ್‌ನ ದೃಶ್ಯ. ಬಹುಮಾನವೂ ಆಕರ್ಷಕ. ಲೆಟ್ಯೂಸ್ ಎಲೆ!

ಬಲ್ಗೇರಿಯಾದ ವೃದ್ಧ ಯಾನ್ ಪೆಟ್ಕೋವ್ (64) ಕೈ– ಕಾಲು ಕಟ್ಟಿಕೊಂಡಿದ್ದಲ್ಲದೇ ಚೀಲದಲ್ಲಿ ನುಸುಳಿಕೊಂಡು 3.4 ಕಿ.ಮೀ. ದೂರ ಈಜಿ ಗಿನ್ನೆಸ್ ದಾಖಲೆ ಮಾಡಿದ್ದಾನಂತೆ. ಇದುವರೆಗಿದ್ದ ಭಾರತದ ಮೀನುಗಾರ ಗೋಪಾಲ್ ಖಾರ್ವಿಯ ದಾಖಲೆಯನ್ನು ಮುರಿದಿರುವ ಈ ಈಜು ತರಬೇತುದಾರ ಹಾಗೂ ಲೈಫ್‌ಗಾರ್ಡ್ ನಿಜಕ್ಕೂ 'ಉಭಯವಾಸಿ'.



ಜಾರ್ಜಿಯಾದಲ್ಲಿ ಇಬ್ಬರು ಮಹಿಳಾ ಪೊಲೀಸರನ್ನು ಅಮಾನತು ಮಾಡಿದ್ದಾರಂತೆ. ಅದರಲ್ಲೇನು ವಿಶೇಷ ಎನ್ನುತ್ತೀರಾ? ವೇಗವಾಗಿ ಕಾರು ಚಾಲನೆ ಮಾಡುತ್ತಿದ್ದ ಮಹಿಳೆಯೊಬ್ಬಳನ್ನು ತಡೆದು ನಿಲ್ಲಿಸಿ ಆಕೆಯನ್ನು ಬಂಧಿಸಬೇಕೋ ಅಥವಾ ಎಚ್ಚರಿಕೆ ಕೊಟ್ಟು ಕಳಿಸಬೇಕೊ ಎಂಬುದನ್ನು ನಿರ್ಣಯಿಸಲು ನಾಣ್ಯ ಚಿಮ್ಮಿದರಂತೆ 'ಹೆಡ್ಡೊ.. ಟೇಲೊ..' ಎನ್ನುತ್ತ. ನಾಣ್ಯ ಚಾಲಕಿಯನ್ನು ಬಂಧಿಸುವಂತೆ ಹೇಳಿತು. ಆದರೆ ಕೋರ್ಟ್ ಆ ಇಬ್ಬರು ಮಹಿಳಾ ಪೊಲೀಸರನ್ನು ಅಮಾನತು ಮಾಡುವಂತೆ ಹೇಳಿತಂತೆ. ಈಗ ಇಬ್ಬರೂ ಹೆಡ್ ಅಡಿ ಮಾಡಿಕೊಂಡು ಓಡಾಡುತ್ತಿರಬಹುದು.